# ಸೊಗಸುಗಾ ಮೃದಂಗ ತಾಳಮು...

**ಮೃದಂಗ ನಾದದ ಮೂಲಕ ಕೇಳುಗರ ಅಂತರಂಗವನ್ನು ತಟ್ಟುತ್ತಿದ್ದವರು ಘನವಿದ್ವಾಂಸ ಟಿ.ಎ.ಎಸ್. ಮಣಿ. ಸುಮಾರು ಏಳು ದಶಕಗಳ ತಮ್ಮ ಸುದೀರ್ಘ ಸಂಗೀತ ಪಯಣದಲ್ಲಿ ಅತ್ಯದ್ಭುತ ಲಯ ತರಂಗಗಳ ಮೂಲಕ ಸಹೃದಯರ ಮನಗೆದ್ದವರು. ಈ ಮೇರು ಮೃದಂಗ ವಿದ್ವಾಂಸ ಇನ್ನು ಬರೀ ನೆನಪಷ್ಟೆ.**

■ ಉಮಾ ಅನಂತ್

ಕರ್ನಾಟಕ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ಸಂತ ತ್ಯಾಗರಾಜರು ಮೃದಂಗ ನಾದದ ಸೊಬಗಿನ ಬಗ್ಗೆ ‘ಶ್ರೀರಂಜಿನಿ ರಾಗ’ದಲ್ಲಿ ‘ಸೊಗಸುಗಾ ಮೃದಂಗ ತಾಳಮು...’ ಎಂಬ ಕೃತಿ ಬರೆದು ವರ್ಣಿಸಿದರು. ಮೃದಂಗ ವಾದನದಲ್ಲಿ ಸುಮಾರು ಏಳು ದಶಕಗಳ ಕಾಲ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ವಿದ್ವಾಂಸ ಟಿ.ಎ. ಸುಬ್ರಮಣಿ ಅವರು ಈ ಅವನದ್ಧ ವಾದ್ಯದ ಸುನಾದ ಮತ್ತಷ್ಟು ಸಂಗೀತಾಸಕ್ತರಿಗೆ ತಲುಪಬೇಕು ಎಂಬ ಮಹತ್ತರ ಉದ್ದೇಶದಿಂದ ಸುಳಾದಿ ಸಪ್ತತಾಳಗಳ ಸೌಂದರ್ಯವನ್ನು ‘ಸೊಗಸುಗಾ ಮೃದಂಗ ತಾಳಮು...’ ಎಂಬ ಶೀರ್ಷಿಕೆಯಡಿ ವಿವರಿಸಿ ಐದು ಸರಣಿ ಪುಸ್ತಕ ಬರೆದರು. ತ್ಯಾಗರಾಜರು ವರ್ಣಿಸಿದ್ದು ಮೃದಂಗ ನುಡಿಸುವಾಗ ಹೊಮ್ಮುವ ನಾದದ ಸೊಬಗನ್ನಾದರೆ, ಮಣಿ ಅವರು ವಿವರಿಸಿದ್ದು ಮೃದಂಗ ನುಡಿಸಾಣಿಕೆಗಾಗಿ ಬಳಸುವ ಎಲ್ಲ ತಾಳಗಳ ಸಮಗ್ರ ವಿವರಣೆಯನ್ನು.

ಕರ್ನಾಟಕ ಸಂಗೀತದ ತಾಳವಾದ್ಯಕ್ಕೆ ಮಣಿ ಅವರ ಕೊಡುಗೆ ಅಪಾರ. ಸಂಗೀತದ ಮಟ್ಟಿಗೆ ಇವರು ಬಹುಶ್ರುತ ವಿದ್ವಾಂಸರು. ಲಯತರಂಗದ ಬಗ್ಗೆ ಅಪಾರ ಜ್ಞಾನ, ಅನುಭವ, ಸಾಧನೆ, ವಿದ್ವತ್ಪೂರ್ಣ ವಿಚಾರಧಾರೆ, ಜೀವನಪ್ರೀತಿಯಿಂದ ಮಣಿ ವಿಶ್ವವೇದಿಕೆಗಳಲ್ಲಿ ಹೆಸರುವಾಸಿಯಾಗಿದ್ದವರು.

ಬೆಂಗಳೂರಿನ ಮಲ್ಲೇಶ್ವರಂನಲ್ಲಿ ‘ಕರ್ನಾಟಕ ಕಾಲೇಜ್ ಆಫ್ ಪರ್ಕಷನ್’ ಎಂಬ ಸಂಸ್ಥೆಯನ್ನು 1964ರಲ್ಲಿ ಸ್ಥಾಪಿಸಿ ಸುಮಾರು ಐದು ದಶಕಗಳ ಕಾಲ ಲಯವಾದ್ಯದ ಬಗ್ಗೆ ಇರುವ ಎಲ್ಲ ಸಾಧ್ಯತೆಗಳನ್ನು ಅಧ್ಯಯನ, ಪ್ರಯೋಗಕ್ಕೆ ಒಳಪಡಿಸಿದವರು. ನೂರಾರು ಮಕ್ಕಳಿಗೆ ಲಯತರಂಗದ ಬಗ್ಗೆ ಬೋಧನೆ ಮಾಡಿದವರು.

ಮೃದಂಗ ಎಂಬ ತಾಳವಾದ್ಯದಲ್ಲಿ ಇವರದು ಅಸಾಧಾರಣ ಕೈಚಳಕ. ಪಕ್ಕವಾದ್ಯಗಾರರಾಗಿ ಸಂಗೀತದ ಘಟಾನುಘಟಿಗಳಿಗೆ ಸಹಕರಿಸುತ್ತಿದ್ದ ಪರಿಯಂತೂ ಅನನ್ಯ.

‘ತನಿಯಾವರ್ತನ’ ಭಾಗದಲ್ಲಿ ಇವರ ಮೃದಂಗ ತರಂಗಗಳು ಕೇಳುಗರ ಹೃದಯವನ್ನು ಬಡಿದೆಬ್ಬಿಸುವಂತಿದ್ದವು. ಅದು ಆದಿತಾಳವೇ ಇರಲಿ, ರೂಪಕ, ಏಕತಾಳಗಳೇ ಇರಲಿ, ಇವರ ಕೈಬೆರಳುಗಳಿಂದ ಹೊಮ್ಮುತ್ತಿದ್ದ ಲಯವೈವಿಧ್ಯ ಬೆರಗು ಹುಟ್ಟಿಸುವಂತಿದ್ದವು.

ಲಯವಾದ್ಯ ಸಂಯೋಜಕರಾಗಿದ್ದ ಮಣಿ ಅವರು ಎಲ್ಲ ಲಯವಾದ್ಯಗಳನ್ನು ಒಂದೇ ವೇದಿಕೆಗೆ ತಂದು ಸೃಷ್ಟಿಸುತ್ತಿದ್ದ ಲಯತರಂಗ ಕಛೇರಿ ಇವರನ್ನು ದೇಶದ ಮುಂಚೂಣಿಯ ‘ಲಯವಾದ್ಯ ಪ್ರವರ್ತಕ’ ಎಂಬ ಹೆಗ್ಗಳಿಕೆಗೆ ಪಾತ್ರರಾಗುವಂತೆ ಮಾಡಿತು.

ಲಯವಾದ್ಯ ಕಲಿಯುವವರಿಗಾಗಿಯೇ ಪಠ್ಯಪುಸ್ತಕವನ್ನು ರೂಪಿಸಿದ ಕೀರ್ತಿ ಈ ಕಲಾವಿದರಿಗೇ ಸಲ್ಲಬೇಕು. ‘ಸೊಗಸುಗಾ ಮೃದಂಗ ತಾಳಮು’ ಎಂಬ ಶೀರ್ಷಿಕೆಯಡಿಯಲ್ಲಿ ಬರೆದ ಲಯವಾದ್ಯದ ಐದು ಸರಣಿ ಪುಸ್ತಕ ಮೃದಂಗ ಕಲಿಯುವ ಎಲ್ಲರಿಗೂ ಬಹಳ ಉಪಯುಕ್ತ ಕೈಪಿಡಿ.

## ಪರಿಪೂರ್ಣ ಕಲಾವಿದ

ಲಯವಾದ್ಯದಲ್ಲಿ ಹಲವು ಪ್ರಯೋಗಗಳನ್ನೂ ಮಾಡಿದ್ದ ಮಣಿ, ಈ ವಾದ್ಯ ನುಡಿಸಾಣಿಕೆಯ ಹಲವು ತಂತ್ರಗಾರಿಕೆಗಳನ್ನು ಕಂಡುಹಿಡಿದು ಅದನ್ನು ನುಡಿಸಿಯೂ ಪರಿಪೂರ್ಣರೆನಿಸಿಕೊಂಡರು. ಇವರ ನುಡಿಸಾಣಿಕೆ ಎಷ್ಟು ಪರಿಪಕ್ವವಾಗಿತ್ತೆಂದರೆ ಘಟಾನುಘಟಿ ಕಲಾವಿದರಾಗಿದ್ದ ಚೆಂಬೈ ವೈದ್ಯನಾಥ ಭಾಗವತರು, ಶೆಮ್ಮಗುಂಡಿ ಶ್ರೀನಿವಾಸ ಅಯ್ಯರ್, ಡಿ.ಕೆ. ಪಟ್ಟಮ್ಮಾಳ್, ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಲ್. ವಸಂತಕುಮಾರಿ, ಎಂ.ಡಿ. ರಾಮನಾಥನ್, ಲಾಲ್ಗುಡಿ ಜಯರಾಮನ್, ಟಿ.ಆರ್. ಮಹಾಲಿಂಗಂ, ಎಂ.ಎಸ್. ಗೋಪಾಲಕೃಷ್ಣನ್, ಎನ್. ರಮಣಿ, ಮಧುರೈ ಟಿ.ಎನ್. ಶೇಷಗೋಪಾಲನ್, ಎಸ್. ಬಾಲಚಂದರ್, ಕೆ.ವಿ. ನಾರಾಯಣಸ್ವಾಮಿ, ನೇದನೂರಿ ಕೃಷ್ಣಮೂರ್ತಿ, ಮಹಾರಾಜಪುರಂ ಸಂತಾನಂ, ಬಾಲಮುರಳಿಕೃಷ್ಣ ಸೇರಿದಂತೆ ಹಲವು ದಿಗ್ಗಜರು ತಮ್ಮ ಕಛೇರಿಗಳಿಗೆ ಮೃದಂಗ ಪಕ್ಕವಾದ್ಯ ನೀಡಲು ವಿದ್ವಾನ್ ಮಣಿ ಅವರೇ ಬೇಕು ಎನ್ನುತ್ತಿದ್ದರು.

## ಲಯ ತರಂಗಿಣಿ ಮತ್ತು ಫ್ಯೂಷನ್

ಕೇಳುಗರಲ್ಲಿ ಲಯವಾದ್ಯದ ಬಗ್ಗೆ ಇರುವ ಅಭಿರುಚಿ ಮತ್ತು ಉತ್ಸುಕತೆಯನ್ನು ಗಮನಿಸಿದ ವಿದ್ವಾನ್ ಮಣಿ ಅವರು ಲಯವಾದ್ಯಗಾರರ ತಂಡ ಕಟ್ಟಿದರು. ಇಲ್ಲಿ ದೇಶದ ವಿವಿಧ ಪ್ರಮುಖ ಲಯವಾದ್ಯಗಾರರನ್ನು ಸೇರಿಸಿ 90 ನಿಮಿಷಗಳ ‘ಲಯ ತರಂಗಿಣಿ’ ಕಛೇರಿ ರೂಪಿಸಿ ದೇಶ ವಿದೇಶಗಳ ನಾನಾ ಪ್ರಮುಖ ವೇದಿಕೆಗಳನ್ನು ಇದನ್ನು ಪ್ರಸ್ತುತಪಡಿಸಿದ್ದರು. ಈ ಕಾರ್ಯಕ್ರಮ ಬಹಳ ಜನಪ್ರಿಯವೂ ಆಗಿತ್ತು.

ಭಾರತೀಯ ಶಾಸ್ತ್ರೀಯ ಸಂಗೀತದ ಜತೆಗೆ ಜಾಸ್ ಮತ್ತು ಪಾಶ್ಚಾತ್ಯ ಸಂಗೀತವನ್ನು ಸಂಯೋಜಿಸಿ ಕಳೆದ ನಾಲ್ಕು ದಶಕಗಳ ಕಾಲ ಮಣಿ ಅವರು ನಡೆಸಿದ ಹಲವಾರು ಪ್ರಯೋಗಾತ್ಮಕ ಕಛೇರಿಗಳು ಕೂಡ ಎಂದಿಗೂ ಜನಮಾನಸದಲ್ಲಿ ಉಳಿಯುವಂಥವು. ಅಲ್ಲದೆ ‘ತಾಳ ತರಂಗಿಣಿ’ ಎಂಬ ಮಣಿ ಅವರ ಸಂಯೋಜನೆಯ ಸಂಗೀತ ಗೋಷ್ಠಿ ಕಛೇರಿ ನಮ್ಮ ದೇಶವಷ್ಟೇ ಅಲ್ಲದೆ ಕೆನಡಾ, ಯೂರೋಪ್, ಜಪಾನ್, ಹಾಂಗ್‌ಕಾಂಗ್, ಆಸ್ಟ್ರೇಲಿಯಾ ಮತ್ತು ರಷ್ಯಾಗಳಲ್ಲಿ ಕೇಳುಗರಲ್ಲಿ ಸಂಚಲನ ಮೂಡಿಸಿದ್ದು ಅಭೂತಪೂರ್ವ ಪ್ರತಿಕ್ರಿಯೆಯೂ ಬಂದಿದೆ. ಹಲವಾರು ಅಂತರರಾಷ್ಟ್ರೀಯ ಸಂಗೀತ ಸಮ್ಮೇಳನ, ಸಮಾವೇಶಗಳಲ್ಲಿ ಮಣಿ ಅವರ ಲಯವಾದ್ಯ ತರಂಗ ಅನುರಣಿಸಿದೆ.



## ಮನೆತನವೇ ಸಂಗೀತದ್ದು

ಹಾಗೆ ನೋಡಿದರೆ ವಿದ್ವಾನ್ ಮಣಿ ಅವರ ಮನೆತನವೇ ಸಂಗೀತದ್ದು. 10ನೇ ವಯಸ್ಸಿನಲ್ಲೇ ಪಾಲ್ಘಾಟ್ ಮಣಿ ಅಯ್ಯರ್ ಅವರ ಶಿಷ್ಯರಾಗಿ ಸಂಗೀತ ಹಾಗೂ ಮೃದಂಗ ಕಲಿಯಲಾರಂಭಿಸಿದರು, ಆಕಾಶವಾಣಿ ಮತ್ತು ದೂರದರ್ಶನದ ಎ ಶ್ರೇಣಿಯ ಕಲಾವಿದರಾಗಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ರೂಪುಗೊಂಡರು. ಇವರ ಪತ್ನಿ ಆರ್.ಎ. ರಮಾಮಣಿ ಉತ್ತಮ ಗಾಯಕಿ ಹಾಗೂ ಕೊನ್ನಕೋಲ್ ಕಲಾವಿದೆ. ಮಗ ಕಾರ್ತಿಕ್ ಮಣಿ ಅವರೂ ಸಂಗೀತಗಾರರೇ.